ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 177 ಯುಬಿವಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 28-5-2015

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು - 560 001.

ಇವರಿಗೆ
ಕುಲಸಚಿವರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

ಮಾನ್ಯರೆ,

ವಿಷಯ:- 2015-16ನೇ ಶೈಕ್ಷಣಿಕ ಸಾಲಿನಿಂದ ಸುರಾನ ಸಂಜೆ ಕಾಲೇಜು, ಬೆಂಗಳೂರು - ಗೆ ಹೊಸ ಸಂಯೋಜನೆ ನೀಡುವ ಕುರಿತು.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ: ಎಸಿಎ-3/ಎ3/ಹೊಕಾಪ್ರ/27/2015-16, ದಿ: 23-3-2015.

---

2015-16ನೇ ಶೈಕ್ಷಣಿಕ ಸಾಲಿನಿಂದ ಜಿ.ಡಿ.ಎ.ಫೌಂಡೇಷನ್, ನಂ.16, ಸೌತ್ ಎಂಡ್ ರಸ್ತೆ, ಬೆಂಗಳೂರು - ವತಿಯಿಂದ ಸುರಾನ ಸಂಜೆ ಕಾಲೇಜನ್ನು ಕೆಂಗೇರಿ, ಸಿಎ-17, ತುಮಕೂರು ಮೈಸೂರು ರಿಂಗ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು, ಇಲ್ಲಿ ಬಿ.ಕಾಂ. ಕೋರ್ಸಿನೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ಕೋರಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾವಿಷಯಕ ಪರಿಷತ್‌ನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಮಾಡಿರುವ ಶಿಫಾರಸ್ಸನ್ನು ಆಧರಿಸಿ ಸಂವೀಕ್ಷಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ (11)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **2015-16ನೇ ಶೈಕ್ಷಣಿಕ ಸಾಲಿನಿಂದ ಜಿ.ಡಿ.ಎ.ಫೌಂಡೇಷನ್, ನಂ.16, ಸೌತ್ ಎಂಡ್ ರಸ್ತೆ, ಬೆಂಗಳೂರು - ವತಿಯಿಂದ ಸುರಾನ ಸಂಜೆ ಕಾಲೇಜನ್ನು ಕೆಂಗೇರಿ, ಸಿಎ-17, ತುಮಕೂರು ಮೈಸೂರು ರಿಂಗ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು, ಇಲ್ಲಿ ಬಿ.ಕಾಂ. ಕೋರ್ಸಿನೊಂದಿಗೆ 40 (ನಲವತ್ತು) ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು** ಸಂಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡುವಂತೆ ಸರ್ಕಾರದ ಶಿಫಾರಸ್ಸನ್ನು ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

**ಷರತ್ತುಗಳು:-**

1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;
2) ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;
3) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;
4) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;
5) ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6) ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

7) ದಿನಾಂಕ: 13-8-1997 ರಂದು ವಿಶಾಖ V/S ರಾಜಸ್ಥಾನ ಸರ್ಕಾರ ಮೊಕದ್ದಮ್ಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8) ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

9) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

10) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

11) ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

12) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ,

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)

ಪ್ರತಿ:-

1. ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು - 560 001.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಅಧ್ಯಕ್ಷರು, ಜಿ.ಡಿ.ಎ.ಫೌಂಡೇಷನ್, ನಂ.16, ಸೌತ್ ಎಂಡ್ ರಸ್ತೆ, ಬೆಂಗಳೂರು-560 004.

SURANA COLLEGE
BANGALORE
28 MAY 2015
082
RECEIVED
Sl. No.
25/5/15

## ಕರ್ನಾಟಕ ಸರ್ಕಾರ

ಇ-ಕಛೇರಿ ಸಂ: ಇಡಿ 79 ಯುಬಿವಿ 2022

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:08.03.2022

**ಇಂದ**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ**
ಕುಲಸಚಿವರು,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ ಆವರಣ,
ಬೆಂಗಳೂರು.

ಮಾನ್ಯರೇ,

ವಿಷಯ: ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಸುರಾನಾ ಸಂಜೆ ಕಾಲೇಜು ಇಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ವ್ಯಾಸಂಗಕ್ರಮಗಳನ್ನು ಹೊಸದಾಗಿ ಆರಂಭಿಸಲು ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್ಇ 2021, ದಿನಾಂಕ:12.02.2021
2. ತಮ್ಮ ಪತ್ರ ಸಂಖ್ಯೆ: ಎಸಿಎ-3/ಎ-3/ಹೊಕೋಪ್ರ/32 /2021-22, ದಿ:31.01.2022

*****

**ಸುರಾನಾ ಸಂಜೆ ಕಾಲೇಜು,** ಕೆಂಗೇರಿ, ಸಿ.ಎ.-17, ತುಮಕೂರು-ಮೈಸೂರು ರಿಂಗ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು-560 060 ಇಲ್ಲಿ ಬಿ.ಸಿ.ಎ. ಸ್ನಾತ್ತಕ ಪದವಿ ವ್ಯಾಸಂಗಕ್ರಮವನ್ನು 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಆರಂಭಿಸಲು ಸಂಯೋಜನೆ ನೀಡುವ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59ರಲ್ಲಿ ಗೊತ್ತುಪಡಿಸಲಾದ ಪ್ರಕ್ರಿಯೆಯನ್ನು ಉಲ್ಲೇಖ(1)ರ ಆದೇಶದಲ್ಲಿನ ಸಂಯೋಜನಾ ಮಾರ್ಗಸೂಚಿಗಳನ್ನು ಅನುಸರಿಸಿ ಆನ್‌ಲೈನ್ ವ್ಯವಸ್ಥೆಯಡಿ ಜರುಗಿಸಿದ ತರುವಾಯ ಪೂರ್ವೋಕ್ತ ಅಧಿನಿಯಮದ ಪ್ರಕರಣ 59(11)ರಡಿ ಅವಶ್ಯಕವಾದ ಸರ್ಕಾರದ ಶಿಫಾರಸ್ಸು ಕೋರಿ ಕಾಲೇಜಿನ ಅರ್ಜಿ, ಸ್ಥಳೀಯ ವಿಚಾರಣೆ ಸಮಿತಿಯ ವರದಿ ಹಾಗೂ ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್ತುಗಳ ಗೊತ್ತುವಳಿಗಳ ದಾಖಲೆಗಳೊಂದಿಗೆ, ಆನ್‌ಲೈನ್ ತಂತ್ರಾಶದಲ್ಲಿ ಅಳವಡಿಸಿರುವ ಪ್ರಪತ್ರಗಳಲ್ಲಿ ಉಲ್ಲೇಖ(2)ರ ಪತ್ರದನ್ವಯ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಸ್ಥಳೀಯ ವಿಚಾರಣೆ ಸಮಿತಿಯ ಅವಲೋಕನೆ ಮತ್ತು ತೀರ್ಮಾನಗಳನ್ನು ಪರಿಗಣಿಸಿದ ತರುವಾಯ ಬೆಂಗಳೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳು ಅಂಗೀಕರಿಸಿದ ಗೊತ್ತುವಳಿಗಳನ್ನು ಅನುಸರಿಸಿ ಹಾಗೂ ಶೈಕ್ಷಣಿಕ/ಭೌತಿಕ ಹಾಗೂ ನಾಗರೀಕ ಮೂಲಸೌಕರ್ಯಗಳ ಲಭ್ಯತೆ ಹಾಗೂ ಗುಣಮಟ್ಟದ ಕಾರ್ಯನಿರ್ವಹಣೆಯ ಖಚಿತತೆಗಾಗಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಲಾದ ನಿಯತಾಂಕಗಳ ಹಾಗೂ ಸೂಚ್ಯಾಂಕಗಳ ಪೂರೈಕೆಯನ್ನು ದೃಢಪಡಿಸಿಕೊಂಡು, **ಸುರಾನಾ ಸಂಜೆ ಕಾಲೇಜು,** ಕೆಂಗೇರಿ, ಸಿ.ಎ.-17, ತುಮಕೂರು-ಮೈಸೂರು ರಿಂಗ್ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು-560 060 ಇಲ್ಲಿ ಬಿ.ಸಿ.ಎ. ಸ್ನಾತ್ತಕ ಪದವಿ ವ್ಯಾಸಂಗಕ್ರಮವನ್ನು ಕೆಳಕಂಡಂತೆ 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಆರಂಭಿಸಲು ಸಂಯೋಜನೆ ನೀಡುವ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(11)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

| ವ್ಯಾಸಂಗಕ್ರಮ | ವಿಷಯಸಮೂಹ | ವಿದ್ಯಾರ್ಥಿಪ್ರಮಾಣ |
|---|---|---|
| ಬಿ.ಸಿ.ಎ. | ವಿವಿ ಪರಿನಿಯಮಗಳಂತೆ | 60(ಅರವತ್ತು) |

**ಸುರಾನಾ ಸಂಜೆ ಕಾಲೇಜು** ಇಲ್ಲಿ ಮೇಲ್ಕಂಡಂತೆ ಸ್ನಾತ್ತಕ ಪದವಿ ವ್ಯಾಸಂಗಕ್ರಮವನ್ನು 2021-22ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಆರಂಭಿಸಲು ಸಂಯೋಜನೆ ನೀಡುವುದು ಸ್ಥಳೀಯ ವಿಚಾರಣೆ ಸಮಿತಿಯ ಷರತ್ತುಗಳು ಸೇರಿದಂತೆ ಹೊಸ ಕೋರ್ಸ್ ಸಂಯೋಜನೆಯ ಈ ಕೆಳಕಂಡ ಎಲ್ಲಾ ಷರತ್ತುಗಳನ್ನು ಪಾಲಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ.

1 ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;

2 ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

3 ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

4 ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

5 ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು

6 ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ;

7 ದಿನಾಂಕ: 13-8-1997 ರಂದು ವಿಶಾಖ v/s ರಾಜಸ್ತಾನ ಸರ್ಕಾರ ಮೊಕದ್ದಮ್ಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ

ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8 ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು;

9 ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

10 ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ;

11 ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ;

12 ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ

Mahesh

(ಮಹೇಶ್ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-2)
08/03/2022

ಪ್ರತಿ:

1. ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
3. ಪ್ರಾಂಶುಪಾಲರು, **ಸುರಾನಾ ಸಂಜೆ ಕಾಲೇಜು,** ಕೆಂಗೇರಿ, ಸಿ.ಎ.-17, ತುಮಕೂರು-ಮೈಸೂರು ರಿಂಗ್ ರಸ್ತೆ,. ಕೆಂಗೇರಿ ಉಪನಗರ, ಬೆಂಗಳೂರು-560 060.